ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ವಿವಿಪ/ಅಸಾಮಾನ್ಯ/274/2022–23 ದಿನಾಂಕ:16.11.2022.

ಗೆ,
ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 29.10.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.**

***

ದಿನಾಂಕ: 29.10.2022 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2 ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬೆಂ.ನ.ವಿ/ವಿವಿಪ/ಅಸಾಮಾನ್ಯ/ 374 /2022-23 ದಿನಾಂಕ: 14.11.2022.

ದಿನಾಂಕ 29.10.2022 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ | ಸಭಾಧ್ಯಕ್ಷರು |
| 2. | ಶ್ರೀ ಕೆ. ಎ. ತಿಪ್ಪೇಸ್ವಾಮಿ | ಸದಸ್ಯರು |
| 3. | ಡಾ. ಶಿಂಟಿ ಆಂಟನಿ | ಸದಸ್ಯರು |
| 4. | ಶ್ರೀ. ಕೆ. ಶಿವಣ್ಣ | ಸದಸ್ಯರು |
| 5. | ಡಾ. ಗುರುನಾಥರಾವ್ ವೈದ್ಯ | ಸದಸ್ಯರು |
| 6. | ಡಾ. ಅನೇಸಿಯಾ | ಸದಸ್ಯರು |
| 7. | ಶ್ರೀ. ಕೆ. ಎಂ ಮಹೇಶ್ | ಸದಸ್ಯರು |
| 8. | ಶ್ರೀ. ಎಂ ಸತೀಶ್ | ಸದಸ್ಯರು |
| 9. | ಡಾ. ಮೊಹಮ್ಮದ್ ಸುಹೇಲ್ ಇಕ್ಬಾಲ್ | ಸದಸ್ಯರು |
| 10. | ಡಾ. ಎಸ್.ಎನ್. ವೆಂಕಟೇಶ್ | ಸದಸ್ಯರು |
| 11. | ಶ್ರೀ. ಸಿ. ಎಂ. ನವೀನ್ ಕುಮಾರ್ | ಸದಸ್ಯರು |
| 12. | ಡಾ. ಸುಪ್ರೀತ್ ಕಿತ್ತನಕೆರೆ | ಸದಸ್ಯರು |
| 13. | ಡಾ. ಎಂ. ಪಾಂಡುರಂಗಪ್ಪ | ಸದಸ್ಯರು |
| 14. | ಡಾ. ವಿ. ಗಾಯತ್ರಿ | ಸದಸ್ಯರು |
| 15. | ಡಾ. ಎಸ್ ಹರಿಪ್ರಸಾದ್ | ಸದಸ್ಯರು |
| 16. | ಡಾ. ಕೆ ಶಿವಶಂಕರ | ಸದಸ್ಯರು |
| 17. | ಡಾ. ವಿ.ಆರ್ ದೇವರಾಜ್ | ಸದಸ್ಯರು |
| 18. | ಶ್ರೀ. ಎಸ್ ಚನ್ನಕೇಶವ | ಸದಸ್ಯರು |
| 19. | ಶ್ರೀ. ಸುನೀಲ್ ಎಡ್ವರ್ಡ್ ಮೆಂಡೇಸ್ | ಸದಸ್ಯರು |
| 20. | ಶ್ರೀ ಆತ್ಮ ಹಿರೇಮಠ | ಸದಸ್ಯರು |
| 21. | ಡಾ. ವಿ.ಲೋಕೇಶ್<br>ಕುಲಸಚಿವರು ಮೌಲ್ಯಮಾಪನ | ಸದಸ್ಯರು |

22. ಶ್ರೀ ರಘು ಜಿ. ಪಿ                                   ಸದಸ್ಯರು
ವಿತ್ತಾಧಿಕಾರಿಗಳು

23. ಶ್ರೀ. ಸಿ. ಎನ್ ಶ್ರೀಧರ್                              ಸದಸ್ಯ
ಕುಲಸಚಿವರು                                          ಕಾರ್ಯದರ್ಶಿಗಳು

ಸಭೆಯ ಪ್ರಾರಂಭದಲ್ಲಿ ಕುಲಸಚಿವರು ಎಲ್ಲ ಸದಸ್ಯರನ್ನು ಸ್ವಾಗತಿಸಿ ಸಭೆಗೆ ಚಾಲನೆ ನೀಡಲು ಮಾನ್ಯ ಸಭಾಧ್ಯಕ್ಷರನ್ನು ಕೋರಿದರು.

ಸಭಾಧ್ಯಕ್ಷರಾದ ಕುಲಪತಿಗಳು ಉಪಸ್ಥಿತ ಸನ್ಮಾನ್ಯ ಸದಸ್ಯರುಗಳಿಗೆ ಮನಃ ಸ್ವಾಗತಿಸಿ, ವಿಶ್ವವಿದ್ಯಾನಿಲಯದಲ್ಲಿ ಜರುಗಿದ ವಿವಿಧ ಪ್ರಮುಖ ಚಟುವಟಿಕೆಗಳ ಕುರಿತು ಪ್ರಸ್ತಾವಿಕವಾಗಿ ಕೆಳಗಿನಂತೆ ವಿವರಿಸಿದರು.

1. ಪ್ರಸ್ತುತ 2022–23ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ (ಪದವಿ) ವ್ಯಾಸಂಗಗಳನ್ನು ಪ್ರಾರಂಭಿಸಲಾಗಿದ್ದು. ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ದೊರಕಿದೆ. ಪದವಿ ವ್ಯಾಸಂಗದ ತರಗತಿಗಳು ದಿನಾಂಕ. 01.09.2022 ರಿಂದ ಪ್ರಾರಂಭವಾಗಿದ್ದು ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸುತ್ತಿದ್ದಾರೆ. ಕಳೆದ ಸಾಲಿನಿಂದ ಪ್ರಾರಂಭಿಸಲಾದ ಬಹುಶಿಸ್ತೀಯ ಮಹಿಳಾ ಘಟಕ ಕಾಲೇಜಿನಲ್ಲಿಯೂ ಸಹ ಈ ವರ್ಷ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶ ಪಡೆದಿರುವುದು ಉತ್ತಮ ಬೆಳವಣಿಗೆ ಎಂದು ಹೇಳಿದರು.

2. "National Curriculum Frame Work" ಸಂಬಂಧಿಸಿದಂತೆ, ಒಂದು ದಿವಸದ ಕಾರ್ಯಾಗಾರವನ್ನು ದಿನಾಂಕ 12.08.2022 ರಂದು ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಜರುಗಿಸಲಾಯಿತು. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆ, NCERT ಜೊತೆಗೂಡಿ ಈ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. 12 ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳ, ನಾಗರೀಕ ಸಮಾಜದ ಗುಂಪುಗಳ ಸದಸ್ಯರು ಒಳಗೊಂಡಂತೆ ಸುಮಾರು 200 ಜನ ಈ ಕಾರ್ಯಾಗಾರದಲ್ಲಿ ಭಾಗವಹಿಸಿದರು.

3. ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆಯ ಅನುಷ್ಠಾನದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯವನ್ನು ರಾಜ್ಯದ ಅತ್ಯುತ್ತಮ ವಿಶ್ವವಿದ್ಯಾನಿಲಯವೆಂದು ಆಯ್ಕೆ ಮಾಡಲಾಗಿದೆ. ನಮ್ಮ ವಿಶ್ವವಿದ್ಯಾನಿಲಯದ NSS ಸಂಯೋಜಕರನ್ನು ಉತ್ತಮ ಸಂಯೋಜಕರೆಂದು ಆಯ್ಕೆ ಮಾಡಲಾಗಿದ್ದು ದಿನಾಂಕ 10.09.2022 ರಂದು ರಾಜಭವನದ ಗಾಜಿನ ಮನೆಯಲ್ಲಿ ಆಯೋಜಿಸಲಾದ ಸಮಾರಂಭದಲ್ಲಿ ಗೌರವಾನ್ವಿತ ರಾಜ್ಯಪಾಲರು ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನಿಸಿದರು.

4. ಭಾರತ@75 – ಉನ್ನತ ಶಿಕ್ಷಣ–ಉನ್ನತ ಭಾರತ" ಕುರಿತಂತೆ ಎರಡು ದಿವಸಗಳು ರಾಷ್ಟ್ರೀಯ ಸಮ್ಮೇಳನವನ್ನು ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ, ಉನ್ನತ ಶಿಕ್ಷಣ ಪರಿಷತ್, ನ್ಯಾಕ್, ICSSR UGC, ICFAI ಮತ್ತು CESS ಸಂಸ್ಥೆಗಳು ಒಳಗೂಡಿ, ಅಖಿಲ ಭಾರತ ರಾಷ್ಟ್ರೀಯ ಶಿಕ್ಷಕರ ಮಹಾಸಂಘ, ಕರ್ನಾಟಕ ರಾಜ್ಯ ಮಹಾವಿದ್ಯಾಲಯಗಳ ಶಿಕ್ಷಕರ ಸಂಘ, ಕರ್ನಾಟಕ ರಾಜ್ಯ ತಾಂತ್ರಿಕ ಮಹಾವಿದ್ಯಾಲಯಗಳು ಶಿಕ್ಷಕರ ಸಂಘಗಳ ಸಹಯೋಗದಿಂದ ದಿನಾಂಕ

7.09.2022 ಮತ್ತು 08.09.2022 ರಂದು ಜರುಗಿಸಲಾಯಿತು. ಸುಮಾರು 1000 ಕ್ಕೂ ಅಧಿಕ ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

5. ವಿಶ್ವವಿದ್ಯಾನಿಲಯ ಕೆಳಕಂಡ ಸಂಸ್ಥೆಗಳೊಂದಿಗೆ ಶೈಕಣಿಕ ಒಡಂಬಡಿಕೆ ಮಾಡಿಕೊಂಡಿರುವ ವಿಷಯ ತಿಳಿಸಿದರು.

a) 3 ಮತ್ತು 4ನೇ ಸೆಮಿಸ್ಟರ್‌ನಲ್ಲಿ ಕಡ್ಡಾಯವಾಗಿ ಬೋಧಿಸಬೇಕಾದ Financial Education and Investment and Awareness ವಿಷಯ ಕುರಿತು NSE Academy ಜೊತೆಗೆ ಉನ್ನತ ಶಿಕ್ಷಣ ಪರಿಷತ್ತಿನ ಆಶ್ರಯದಲ್ಲಿ, ಮಾನ್ಯ ಉನ್ನತ ಶಿಕ್ಷಣ ಸಚಿವರ ಉಪಸ್ಥಿತಿಯಲ್ಲಿ ದಿನಾಂಕ: 12.07.2022ರಂದು ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಯಿತು. ಈ ಒಡಂಬಡಿಕೆಯಿಂದ Financial Education and Investment Awareness ವಿಷಯಕ್ಕೆ ಸಂಬಂಧಿಸಿದ ಪಠ್ಯ, ಪ್ರವಚನ ಪ್ರಾಯೋಗಿಕ ತರಬೇತಿ online ಹಾಗೂ offline ಉಪನ್ಯಾಸ ಇತ್ಯಾದಿಗಳನ್ನು NSE ಅಕಾಡೆಮಿ ವಹಿಸುತ್ತದೆ.

b) Karnataka State Higher Education Council ಆಶ್ರಯದಲ್ಲಿ Infosys ಜೊತೆಗೆ ದಿನಾಂಕ 06.09.2022ರಂದು ಮಾಡಿಕೊಳ್ಳಲಾದ ಒಡಬಂಡಿಕೆ ಪ್ರಕಾರ Infosys ಸಂಸ್ಥೆ, ವಿವಿಧ ಶೈಕ್ಷಣಿಕ ಹಂತದ ಸುಮಾರು 12,000 ವಿಷಯಗಳಿಗೆ ಸಂಬಂಧಿಸಿದ ಕಲಿಕಾ ತರಬೇತಿ ಪ್ರಾತ್ಯಕ್ಷಿಕೆಗಳನ್ನು ಸಿದ್ಧಪಡಿಸಿ ಆನ್‌ಲೈನ್‌ನಲ್ಲಿ ಒದಗಿಸುತ್ತದೆ. ಇದಕ್ಕಾಗಿ Spring Board Platform ಸಿದ್ಧಪಡಿಸಿದ್ದು ಅದರ ಉಪಯೋಗ ಕುರಿತು ತರಬೇತಿ ನೀಡುತ್ತದೆ. ನೊಂದಾಯಿತ ಶಿಕ್ಷಣ ಸಂಸ್ಥೆಯ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಇದರಿಂದ ಹೆಚ್ಚಿನ ಕಲಿಕೆಗೆ ಅವಕಾಶ ಒದಗಿಸುತ್ತದೆ. ಇದು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತ ಸಾಧನವಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ದಿನಾಂಕ 20 ಮತ್ತು 21 ಅಕ್ಟೋಬರ್ 2022 ರಂದು ಮೈಸೂರಿನ Infosys ಸಂಸ್ಥೆಯಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು ಮತ್ತು ಆಯ್ದ ಶಿಕ್ಷಕರ ಸಮಾವೇಶವನ್ನು ಜರುಗಿಸಿ ಉಪಯುಕ್ತ ಮಾಹಿತಿ ನೀಡಲಾಯಿತು. ನಮ್ಮ ವಿಶ್ವವಿದ್ಯಾನಿಲಯದಿಂದ ಕುಲಪತಿಗಳು ಹಾಗೂ 3 ಜನ ಶಿಕ್ಷಕರಾದ ಡಾ. ರಿತಿಕಾ ಸಿನ್ಹಾ, ಡಾ. ಕೆ.ಆರ್ ಜಲಜಾ ಮತ್ತು ಡಾ. ರಮೇಶ್ ಕುದೇನಟ್ಟಿರವರು ಭಾಗವಹಿಸಿದ್ದರು.

c) ಉನ್ನತ ಶಿಕ್ಷಣ ಪರಿಷತ್ ಆಶ್ರಯದಲ್ಲಿ ಬ್ರಿಟಿಷ್ ಕೌನ್ಸಿಲ್ ಜೊತೆಗೆ ದಿನಾಂಕ: 09.06.2022 ಮತ್ತು 16.07.2022 ರಂದು ಸಮಾಲೋಚನೆ ಜರುಗಿಸಲಾಯಿತು. ಇದರ ಮುಂದುವರಿಕೆಯಾಗಿ ವಿಶ್ವವಿದ್ಯಾಲಯದ ಸಲ್ಲಿಸಿದ ಆಸಕ್ತಿ ಪತ್ರದ ಆಧಾರದ ಮೇಲೆ ನಮ್ಮ ವಿಶ್ವವಿದ್ಯಾನಿಲಯವನ್ನು ಶೈಕ್ಷಣಿಕ ಮತ್ತು ಸಂಶೋಧನಾ ಸಹಯೋಗಕ್ಕಾಗಿ ಇಂಗ್ಲೆಂಡ್ ದೇಶದ ಐದು ವಿಶ್ವವಿದ್ಯಾನಿಲಯಗಳಾದ 1. ಯುನಿವರ್ಸಿಟಿ ಆಫ್ ಬಾತ್ 2. ಯುನಿವರ್ಸಿಟಿ ಆಫ್ ಐಲ್ಯಾಂಡ್ & ಹೈಲ್ಯಾಂಡ್ 3. ಎಡ್ಜಹಿಲ್ ಯುನಿವರ್ಸಿಟಿ 4. ಬರ್ಮಿಂಗ್ ಹ್ಯಾಮ್ ಯುನಿವರ್ಸಿಟಿ 5. ಬರ್ಮಿಂಗ್ ಹ್ಯಾಮು ಸಿಟಿ ಯುನಿವರ್ಸಿಟಿಗಳು ನಮ್ಮ ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಮತ್ತು ಸಂಶೋಧನೆಗಾಗಿ ಆಸಕ್ತಿ ವ್ಯಕ್ತಪಡಿಸಿರುತ್ತವೆ. ಈ ಕುರಿತು ಮುಂದಿನ ಹಂತದ ಚರ್ಚೆಗಳು ನಡೆಸಿ ಪ್ರಸ್ತಾವನೆಯನ್ನು ಅಂತಿಮಗೊಳಿಸಲಾಗುವುದು. ಇದಕ್ಕಾಗಿ 10000 GBP ಗಳ ಅನುದಾನದ ಮೊತ್ತವನ್ನು ಮಂಜೂರು ಮಾಡಲಾಗಿದ್ದು, ಇದಕ್ಕೆ ಸಮಾನವಾದ ಅನುದಾನವನ್ನು ಈ ವಿಶ್ವವಿದ್ಯಾನಿಲಯ ನೀಡುವ ಷರತ್ತು ವಿಧಿಸಲಾಗಿದೆ. ಇದರಿಂದಾಗಿ ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಮತ್ತು ಅಧ್ಯಾಪಕರು ಯು.ಕೆ ದೇಶದ ವಿಶ್ವವಿದ್ಯಾನಿಲಯಗಳಲ್ಲಿ ಹೆಚ್ಚಿನ

ವ್ಯಾಸಂಗ/ಸಂಶೋಧನೆ ಮಾಡಲು ಅವಕಾಶ ಕಲ್ಪಿಸಲಾಗುತ್ತದೆ. ಇದಲ್ಲದೆ Harrisburg ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಹಾಗೂ ಸಂಶೋಧನೆಗಳಿಗೆ ಕುರಿತಂತೆ, ಸಹಭಾಗಿತ್ವವರಿತು ಮಾತುಕತೆಗಳ ಪ್ರಗತಿ ಹಂತದಲ್ಲಿವೆ ಎಂದು ತಿಳಿಸಿ University of Alabama ದೊಂದಿಗಿನ ಚರ್ಚೆಗಳು ಮುಂದುವರೆದಿದ್ದು, ಅಲ್ಲಿಯೂ ಉತ್ತೇಜನಕಾರಿ ಬೆಳವಣಿಗೆಗಳು ಕಂಡು ಬಂದಿವೆ ಎಂದು ಹೇಳಿ ಅಲಬಾಮಾ ವಿಶ್ವವಿದ್ಯಾನಿಲಯದ ನಿರ್ದೇಶಕರು ಹಾಗೂ ಪ್ರಾಧ್ಯಾಪಕರು ವಿಶ್ವವಿದ್ಯಾನಿಲಯದ ಕುಲಪತಿಗಳು ಮತ್ತು ಅಧಿಕಾರಿಗಳೊಂದಿಗೆ ಕಂಪ್ಯೂಟರ್ ವಿಜ್ಞಾನದಲ್ಲಿ ಸಂಶೋಧನೆಗೆ ಪ್ರೋತ್ಸಾಹ ನೀಡುವ ಕುರಿತು ದಿನಾಂಕ 31.10.2022 ರಂದು ಸಮಾಲೋಚನೆಗೆ ಆಗಮಿಸಲಿದ್ದಾರೆ ವಿದ್ಯಾರ್ಥಿಗಳೊಂದಿಗೆ ಸಂವಾದ ಸಹ ನಡೆಸಲಿದ್ದಾರೆ ಎಂದು ತಿಳಿಸಿ, ಸಂಶೋಧನೆಯಲ್ಲಿ ಆಸಕ್ತಿ ತೋರಿಸುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಇಂಗಿತ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

NEP ಆಧಾರದ ಮೇಲೆ ಕಳೆದ ವರ್ಷದಲ್ಲಿ ಪ್ರಾರಂಭಿಸಲಾದ ಹೊಸ ವ್ಯಾಸಂಗ ಪದ್ಧತಿಯ ಒಂದು ವರ್ಷ ಮುಗಿದಿದ್ದು 2ನೇ ವರ್ಷದ 3 ಮತ್ತು 4 ನೇ ಸೆಮಿಸ್ಟರ್ ವ್ಯಾಸಂಗಗಳ ಪಠ್ಯಕ್ರಮಗಳನ್ನು ಸಿದ್ಧಪಡಿಸಿ ಸಭೆಯಲ್ಲಿ ಮಂಡಿಸಲಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ. ತಿಪ್ಪೇಸ್ವಾಮಿ ಅವರು N.S.E. ಅವರೊಂದಿಗೆ ಮಾಡಿಕೊಳ್ಳಲಾದ ಒಡಂಬಡಿಕೆ ಹಾಗೂ Infosys ಒಡಬಂಡಿಕೆಗಳ ಕುರಿತು ಕೇಳಲಾದ ಮಾಹಿತಿಗಳನ್ನು ಅಧ್ಯಕ್ಷರು ಒದಗಿಸಿದರು. ಮಾನ್ಯ ಸದಸ್ಯರು ವಿಶ್ವವಿದ್ಯಾನಿಲಯದಲ್ಲಿ ಜರುಗುತ್ತಿರುವ ಶೈಕ್ಷಣಿಕ ಬೆಳವಣಿಗೆಗಳ ಕುರಿತು ಹರ್ಷ ವ್ಯಕ್ತಪಡಿಸಿದರು ಇದಕ್ಕಾಗಿ ಮಾನ್ಯ ಕುಲಪತಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸಿಬ್ಬಂದಿಗೆ ಅಭಿನಂದನೆಗಳನ್ನು ಸೂಚಿಸಿದರು.

ಸದಸ್ಯರಾದ ಸುಪ್ರೀತ್ ಕಿತ್ತನ್‌ಕೆರೆಯವರು ಸಹ ವಿಶ್ವವಿದ್ಯಾನಿಲಯ ಮುನ್ನಡೆಯುತ್ತಿರುವ ಕ್ರಮಕ್ಕೆ ಮೆಚ್ಚುಗೆ ಸೂಚಿಸಿ, ಹೊರದೇಶದ ವಿಶ್ವವಿದ್ಯಾನಿಲಯಗಳ ಸಹಯೋಗದೊಂದಿಗೆ ಕಲಿಕೆ ಸಂಶೋಧನೆಗಳಿಗೆ ಯೋಜನೆ ಸೂಚಿಸಲು ಮತ್ತು ಒಡಂಬಡಿಕೆ ಮಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳ ಕುರಿತು ವಿವರಗಳನ್ನು ಬಯಸಿದರು. ತಾವೂ ಕೂಡ ಕೆಲವು ವಿಶ್ವವಿದ್ಯಾಲಯಗಳೊಂದಿಗೆ ಸಂಪರ್ಕ ಹೊಂದಿದ್ದು ಅಗತ್ಯ ಮಾಹಿತಿ ನೀಡುವುದಾಗಿ ತಿಳಿಸಿದರು. ಇದಲ್ಲದೆ ಅಟಲ್ ಇನ್‌ಕ್ಯೂಬೇಷನ್ ಸೆಂಟರ್ ಮತ್ತು ರಾಷ್ಟ್ರೀಯ ನೀತಿ ಆಯೋಗದಿಂದ ಸಹ ಹೊಸ ಯೋಜನೆಗಳಿಗೆ ಅನುದಾನಕ್ಕಾಗಿ ಪ್ರಯತ್ನಿಸಬೇಕೆಂದು ತಿಳಿಸಿದರು. ಕುಲಪತಿಗಳು ವಿವರಣೆ ನೀಡಿ, ವಿಶ್ವವಿದ್ಯಾನಿಲಯ ಯಾವುದೇ ಕೇಂದ್ರ ಸರ್ಕಾರದ ಸಂಸ್ಥೆ ಮೂಲಕ ಅನುದಾನ ಪಡೆಯಲು ಯು.ಜಿ.ಸಿ 12ಬಿ ಅಡಿಯಲ್ಲಿ ಮಾನ್ಯತೆ ಹೊಂದಬೇಕಾಗಿರುವುದು ಅನಿವಾರ್ಯವಾಗಿದೆ. ಈ ಕುರಿತು ಪ್ರಯತ್ನಗಳು ಜಾರಿಯಲ್ಲಿವೆ. ಇದಕ್ಕಾಗಿ NAAC ಮಾನ್ಯತೆ ಹೊಂದುವುದು ಕಡ್ಡಾಯವಾಗಿದೆ. ಈ ಎಲ್ಲ ಕಾರಣಗಳಿಂದ ಸಾಮರ್ಥ್ಯ ಹೊಂದಿದ್ದರೂ, ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಸಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದರು. ಆದಾಗ್ಯೂ ಸದಸ್ಯರ ಕಾಳಜಿ ಹಾಗೂ ಉತ್ಸಾಹಕ್ಕೆ ಮೆಚ್ಚುಗೆ ಸೂಚಿಸಿ, ಅವರ ಸಹಾಯ ಅಗತ್ಯವಾಗಿ ಪಡೆಯಲಾಗುವುದು ಎಂದು ಹೇಳಿದರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

ವಿಷಯ ಸಂಖ್ಯೆ: 1

ವಿಷಯ : ದಿನಾಂಕ 16.03.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ 5ನೇ ಸಾಮಾನ್ಯ ಸಭೆ, ದಿನಾಂಕ 08.04.2022 ರಂದು ಜರುಗಿದ ಅಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆ ದಿನಾಂಕ 28.06.2022 ರಂದು ಜರುಗಿದ ಅಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆ ಹಾಗೂ ದಿನಾಂಕ 06.08.2022 ರಂದು ಜರುಗಿದ ಅಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಗಳ ಧೃಡಿಕೃತ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿ.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ದಿನಾಂಕ 16.03.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ 5ನೇ ಸಾಮಾನ್ಯ ಸಭೆ, ದಿನಾಂಕ 08.04.2022 ರಂದು ಜರುಗಿದ ಅಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆ ದಿನಾಂಕ 28.06.2022 ರಂದು ಜರುಗಿದ ಅಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆ ಹಾಗೂ ದಿನಾಂಕ 06.08.2022 ರಂದು ಜರುಗಿದ ಅಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಗಳಿಗೆ ಸಭೆ ಅನುಮೋದನೆ ನೀಡಿತು.**

ವಿಷಯ ಸಂಖ್ಯೆ: 2

Sub: Consideration and approval of the Syllabus the III & IV Semester of the UG Course recommended by the Board of Studies in the Faculty of Arts as per the NEP -2020 guidelines –reg

***REFERENCE NOTE***:

All the Chairpersons have been requested to convene the Board of Studies meeting to finalize the Syllabus of III & IV Semester UG Course as per NEP-2020 guidelines. The Model Program Structures and the Syllabus prepared by the Subject Experts Committees constituted by the Karnataka State Higher Education Council were sent to the Chairpersons for the reference of the Board of Studies. The Chairpersons of the following Under Graduate Boards of Studies in the Faculty of Arts have recommended the Syllabus for III and IV Semester Course for implementation from the academic year 2022-23.

| Sl. No. | Board of Studies | BoS Meeting held on |
|---|---|---|
| 1. | BoS in Kannada | 13.10.2022 |
| 2. | BoS in English | 10.10.2022 |
| 3. | BoS in Hindi | 02.07.2022 |
| 4. | BoS in Urdu | 20.07.2022 |
| 5. | BoS in Tamil and Malayalam | 22.06.2022 |
| 6. | BoS in Foreign Languages | 01.07.2022 |

| | | |
|---|---|---|
| 7. | BoS in Economics | 15.09.2022 |
| 8. | BoS in History | 28.09.2021 & 29.09.2021 |
| 9. | BoS in Performing Arts | By circulation |
| 10. | BoS in Political Science | 27.09.2022 |
| 11. | BoS in Sociology | 12.10.2022 |
| 12. | BoS in Women Studies | 23.07.2022 |
| 13. | BoS in Social Work | By circulation |
| 14. | BoS in Visual Arts | By circulation |

ವಿದ್ಯಾವಿಷಯಕ ಪರಿಷತ್ ನಿರ್ಣಯ:

ಕಲಾ ನಿಕಾಯದ ವಿವಿಧ ವಿಷಯಗಳ ಅಧ್ಯಯನ ಮಂಡಳಿಗಳು ಸಿದ್ದಪಡಿಸಿದ 3 ಮತ್ತು 4ನೇ ಸೆಮಿಸ್ಟರ್ ಪಠ್ಯ ಕ್ರಮಗಳನ್ನು ವಿದ್ಯಾವಿಷಯಕ ಪರಿಷತ್ ಸಭೆ ಪರಿಶೀಲಿಸಿ ಅನುಮೋದನೆ ನೀಡಲು ತೀರ್ಮಾನಿಸಿತು.

ಪಠ್ಯಕ್ರಮಗಳನ್ನು ಸಲ್ಲಿಸದೇ ಇರುವ ಕೆಲವು ವಿಷಯಗಳ ಅಧ್ಯಯನ ಮಂಡಳಿಗಳು ಕೂಡಲೇ ಸಲ್ಲಿಸಲು ಸೂಚಿಸಿ ಅಂತಹ ಪಠ್ಯಕ್ರಮಗಳನ್ನು ಹಾಗೂ ಪ್ರಸ್ತುತ ಅನುಮೋದಿಸಿರುವ ಪಠ್ಯಕ್ರಮಗಳಲ್ಲಿ ಅಗತ್ಯವಾದ ತಿದ್ದುಪಡಿಗಳನ್ನು ಪರಿಗಣಿಸಿ ಜಾರಿಗೊಳಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಆಂಗ್ಲ ವಿಷಯದಲ್ಲಿ **Optional English** ಪಠ್ಯಕ್ರಮ ಮುದ್ರಣದ ಹಂತದಲ್ಲಿ ಬಿಟ್ಟುಹೋಗಿರುವುದನ್ನು ಗಮನಿಸಿ ಅವುಗಳನ್ನು ಸೇರಿಸಿ ಅಧಿಸೂಚನೆ ಹೊರಡಿಸಲು ಅನುಮೋದನೆ ನೀಡಲಾಯಿತು.

ವಿವಿಧ ಕೋರ್ಸ್‌ಗಳ ಭಾಷಾವಿಷಯಕ್ಕೆ ಸಂಬಧಿಸಿದಂತೆ ಏಕರೂಪದ ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳನ್ನು ನಿಗದಿಪಡಿಸುವ ಕುರಿತು ಅಧ್ಯಯನ ಮಂಡಳಿಗಳು ಗಮನಹರಿಸಬೇಕೆಂದು ಸಲಹೆ ನೀಡಲಾಯಿತು.

ವಿಷಯ ಸಂಖ್ಯೆ: 3

Sub: Consideration and approval of the Syllabus the III & IV Semester recommended by the Board of Studies in the Faculty of Science as per the NEP -2020 guidelines –reg

***REFERENCE NOTE***:

All the Chairpersons have been requested to convene the Board of Studies meeting to finalize the Syllabus of III & IV Semester UG Course as per NEP-2020 guidelines. The Model Program Structures and the Syllabus prepared by the Subject Experts Committees constituted by the Karnataka State Higher Education Council were sent to the Chairpersons for the reference of the Board of Studies. The Chairpersons of the following Under Graduate Boards of Studies in the Faculty of Science have recommended the III & IV Semester Course for implementation from the academic year 2022-23.

| Sl.No. | Board of Studies | BoS Meeting held on |
|---|---|---|
| 1. | BoS in Physics | 07.09.2022 |
| 2. | BoS in Chemistry | 30.09.2022 |
| 3. | BoS in Biochemistry | 03.09.2022 |
| 4. | BoS in Botany | 07.09.2022 |
| 5. | BoS in Zoology and Genetics | 26th & 27th Aug.2022 |
| 6. | BoS in Mathematics | 28.09.2022 |
| 7. | BoS in Electronics | 15& 16.09.2022 |
| 8. | BoS in Computer Science (B.Sc. Computer Sci., BCA, B.Voc (IT) | 19.09.2022 |
| 9. | BoS in Home Science | 16.09.2022 |
| 10. | BoS in Psychology | 25.08.2022 |
| 11. | BoS in Fashion and Apparel Design | 07.09.2022 |
| 12. | BoS in Geography | 22.09.2022 |
| 13. | BoS in Criminology and Forensic Science | By Circulation |
| 14. | BoS in Microbiology and Biotechnology | By Circulation |

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

ವಿಜ್ಞಾನ ನಿಕಾಯದ ವಿವಿಧ ವಿಷಯಗಳ ಅಧ್ಯಯನ ಮಂಡಳಿಗಳು ಸಿದ್ಧಪಡಿಸಿದ 3 ಮತ್ತು 4ನೇ ಸೆಮಿಸ್ಟರ್ ಪಠ್ಯ ಕ್ರಮಗಳನ್ನು ವಿದ್ಯಾವಿಷಯಕ ಪರಿಷತ್ ಸಭೆ ಪರಿಶೀಲಿಸಿ ಅನುಮೋದನೆ ನೀಡಲು ತೀರ್ಮಾನಿಸಿತು.

ಪಠ್ಯಕ್ರಮಗಳನ್ನು ಸಲ್ಲಿಸದೇ ಇರುವ ಕೆಲವು ವಿಷಯಗಳ ಅಧ್ಯಯನ ಮಂಡಳಿಗಳು ಕೂಡಲೇ ಸಲ್ಲಿಸಲು ಸೂಚಿಸಿ ಅಂತಹ ಪಠ್ಯಕ್ರಮಗಳನ್ನು ಹಾಗೂ ಪ್ರಸ್ತುತ ಅನುಮೋದಿಸಿರುವ ಪಠ್ಯಕ್ರಮಗಳಲ್ಲಿ ಅಗತ್ಯವಾದ ತಿದ್ದುಪಡಿಗಳನ್ನು ಜಾರಿಗೊಳಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಸದಸ್ಯರಾದ ಶ್ರೀ ಕೆ. ಎ. ತಿಪ್ಪೇಸ್ವಾಮಿ ರವರು ಕಳೆದ ವರ್ಷದ ಅನುಭವಗಳನ್ನು ಗಮನದಲ್ಲಿಟ್ಟಿಕೊಂಡು ಪಠ್ಯಕ್ರಮ ಹಾಗೂ ಕಲಿಕಾ ಪದ್ಧತಿಯಲ್ಲಿ ಸುಧಾರಣೆಗಳು ಆಗಬೇಕು ಹಾಗೂ ಪರಿಸರ ವಿಜ್ಞಾನ ಸಂಬಂಧಿಸಿದಂತೆ ಸರ್ಕಾರದ ಸಂಸ್ಥೆಗಳಲ್ಲಿ ಲಭ್ಯವಿರುವ ತಜ್ಞರ ಸಹಾಯ / ಸಹಕಾರ ಪಡೆಯುವ ಕುರಿತು ಅಧ್ಯಯನ ಮಂಡಳಿಗಳು ಗಮನ ಹರಿಸಬೇಕೆಂದು ಸಲಹೆ ನೀಡಿದರು.

ವಿಷಯ ಸಂಖ್ಯೆ: 4

ವಿಷಯ: ಪತ್ರಿಕೋದ್ಯಮ ಮತ್ತು ಸಂವಹನ ವಿಷಯದ 3 ಮತ್ತು 4ನೇ ಸೆಮಿಸ್ಟರ್ ಪಠ್ಯಕ್ರಮಗಳ ಕುರಿತು.

ಉಲ್ಲೇಖ:
1. ಈ ಕಛೇರಿ ಅಧಿಸೂಚನೆ No.BCU/BoS/Mass Commun. & Journ.UG/135/2021-22 dated.25/27.08.2022.
2. ದಿನಾಂಕ. 12.10.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ನಡವಳಿಗಳ
3. ಅಧ್ಯಯನ ಮಂಡಳಿ ಅಧ್ಯಕ್ಷರ ಪತ್ರ ದಿನಾಂಕ.30.10.2021
4. ಅಧ್ಯಯನ ಮಂಡಳಿ ಅಧ್ಯಕ್ಷರ ಪತ್ರ ದಿನಾಂಕ. 16.12.2021

ಪರಾಮರ್ಶಕ ಟಿಪ್ಪಣಿ

2021–22 ನೇ ಶೈಕ್ಷಣಿಕ ಸಾಲಿನಿಂದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ, ಹೊಸದಾಗಿ ಪರಿನಿಯಮ (Regulations) ರಚಿಸಿ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸು ಪಡೆದು, ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡ ಪರಿನಿಯಮಗಳನ್ನು ಅಧಿಸೂಚನೆ ಮೂಲಕ ದಿನಾಂಕ. 22.04.2022 ರಂದು ಜಾರಿಗೊಳಿಸಲಾಗಿದೆ. ಈ ಪರಿನಿಯಮಗಳಿಗೆ ಪೂರಕವಾಗಿ ಪಠ್ಯಕ್ರಮಗಳನ್ನು ಸಿದ್ದಪಡಿಸಿ ದಿನಾಂಕ 12.10.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆ ಪಡೆದು 2021–22ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಈ ಸಂದರ್ಭದಲ್ಲಿ ಪತ್ರಿಕೋದ್ಯಮವನ್ನು ಸಂವಹನ ಒಳಗೊಂಡಂತೆ ಕೆಲವು ವಿಷಯಗಳ ಪಠ್ಯಕ್ರಮಗಳನ್ನು ಸಿದ್ಧಪಡಿಸುವಲ್ಲಿ ವಿಳಂಬವಾದ್ದುದರಿಂದ ಸಭೆಯ ನಂತರದಲ್ಲಿ ಸ್ವೀಕರಿಸಲಾಗುವ ಪಠ್ಯಕ್ರಮಗಳನ್ನು ಅನುಮೋದಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಉಲ್ಲೇಖ (3) ರ ಪತ್ರದಲ್ಲಿ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮಂಡಳಿಯ ಅಧ್ಯಕ್ಷರು ಕೆಲಸದ ಒತ್ತಡ ಹಾಗೂ ಸದಸ್ಯರಿಗೆ ಅನುಕೂಲಕರವಾದ ದಿನಾಂಕ ನಿಗದಿಪಡಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಸಲ್ಲಿಸಿರುವ ಮಾದರಿ ಪಠ್ಯಕ್ರಮದ ಪ್ರತಿಯನ್ನು ಸಲ್ಲಿಸಿ, ಜಾರಿಗೊಳಿಸಲು ವಿನಂತಿಸಿರುತ್ತಾರೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದರಿ ಪಠ್ಯಕ್ರಮವನ್ನು ಮುಂಬರುವ ಅಧ್ಯಯನ ಮಂಡಳಿ ಸಭೆಯಲ್ಲಿ ಮಂಡಿಸಿ ಘಟನೋತ್ತರ ಅನುಮೋದನೆ ಪಡೆಯುವ ಷರತ್ತಿಗೆ ಒಳಪಟ್ಟು ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಜಾರಿಗೊಳಿಸಲಾಗಿದೆ. ವಿಶ್ವವಿದ್ಯಾನಿಲಯಕ್ಕೆ ನಿಯಮಾನುಸಾರ ಅಧ್ಯಯನ ಮಂಡಳಿ ಒಪ್ಪಿಗೆ ಪಡೆಯದೇ ಪಠ್ಯಕ್ರಮ ಸಲ್ಲಿಸಿ ಮುಜುಗರ ಉಂಟುಮಾಡಿರುವ ಸಂದರ್ಭವನ್ನು ವಿವರಿಸಿ ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ಪತ್ರ ಬರೆಯಲು, ಅಧ್ಯಕ್ಷರು, ತಮ್ಮ ಸ್ಥಾನಕ್ಕೆ (ಅಧ್ಯಯನ ಮಂಡಳಿ ಅಧ್ಯಕ್ಷರ ಸ್ಥಾನಕ್ಕೆ) ರಾಜಿನಾಮೆ ಸಲ್ಲಿಸಿದ್ದಾರೆ. ಪರಿಯಮ 8.2 ಪ್ರಕಾರ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು ಅಧ್ಯಯನ ಮಂಡಳಿ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ.

ಆದರೆ, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮಂಡಳಿ ಅಧ್ಯಕ್ಷರ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿರುವುದರಿಂದ 3 ಮತ್ತು 4ನೇ ಸೆಮಿಸ್ಟರ್ ಪಠ್ಯಕ್ರಮಗಳನ್ನು ಅಧ್ಯಯನ ಮಂಡಳಿಯ ಅನುಮೋದನೆ ಇಲ್ಲದೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಸಲ್ಲಿಸಿದ ಮಾದರಿ ಪಠ್ಯಕ್ರಮವನ್ನು ನೇರವಾಗಿ ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಕಳೆದ ವರ್ಷ (2021–22) ಅಧ್ಯಯನ ಮಂಡಳಿ ಅನುಮೋದನೆ ಇಲ್ಲದೆ ಅಧ್ಯಕ್ಷರು ಸಲ್ಲಿಸಿದ ಪಠ್ಯಕ್ರಮಗಳನ್ನು ಜಾರಿಗೊಳಿಸಿರುವುದನ್ನು ಈ ವರ್ಷ (2022–23) ಅಧ್ಯಕ್ಷರು ಪಠ್ಯಕ್ರಮವನ್ನು ಕೊನೆಯ ಹಂತದಲ್ಲಿ ಅಧ್ಯಯನ ಮಂಡಳಿ ಸಭೆಯ ಅನುಮೋದನೆ ಪಡೆದು ಸ್ನಾತಕ 3 ಮತ್ತು 4ನೇ ಸೆಮಿಸ್ಟರ್ ಪಠ್ಯಕ್ರಮಗಳನ್ನು ಸಭೆಯಲ್ಲಿ ಸಲ್ಲಿಸಿರುವುದನ್ನು ಹಾಗೂ 1 ಮತ್ತು 2ನೇ ಸೆಮಿಸ್ಟರ್ ಪಠ್ಯಕ್ರಮಗಳ ಘಟನೋತ್ತರ ಅನುಮೋದನೆ ಪಡೆದಿರುವುದನ್ನು ಸಭೆಯು ಗಂಭಿರವಾಗಿ ಪರಿಗಣಿಸಿ ಆಡಳಿತಾತ್ಮಕ ಕ್ರಮಗಳನ್ನು ಪ್ರತ್ಯೇಕವಾಗಿ ಪರಿಗಣಿಸಬೇಕೆಂದು ಸೂಚಿಸಿ, ಅಧ್ಯಯನ ಮಂಡಳಿ ಶಿಫಾರಸ್ಸು ಮಾಡಿರುವ 3ನೇ ಮತ್ತು 4ನೇ ಸೆಮಿಸ್ಟರ್ ಪಠ್ಯಕ್ರಮಗಳಿಗೆ ಅನುಮೋದನೆ ನೀಡಲು ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 5

ವಿಷಯ: 2020–21ನೇ ಸಾಲಿನಲ್ಲಿ ಪ್ರಥಮ ಸೆಮಿಸ್ಟರ್ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಬಿ.ಎಸ್ಸಿ ಗಣಿತಶಾಸ್ತ್ರ ಐದನೇ ಮತ್ತು ಆರನೇ ಸೆಮಿಸ್ಟರ್ ಪಠ್ಯಕ್ರಮವನ್ನು 2022–23 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಕುರಿತು

ಪರಾಮರ್ಶಕ ಟಿಪ್ಪಣಿ:

ದಿನಾಂಕ 21.09.2022 ರಂದು ಜರುಗಿದ ಗಣಿತಶಾಸ್ತ್ರ ಸ್ನಾತಕ ಅಧ್ಯಯನ ಮಂಡಳಿ ಸಭೆಯಲ್ಲಿ ಬಿ.ಎಸ್ಸಿ ಗಣಿತಶಾಸ್ತ್ರ ವ್ಯಾಸಂಗದ ಐದನೇ ಮತ್ತು ಆರನೇ ಸೆಮಿಸ್ಟರ್ ಪಠ್ಯಕ್ರಮವನ್ನು ಸಿದ್ಧಪಡಿಸಿ 2022–23 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲು ಶಿಫಾರಸ್ಸು ಮಾಡಿರುತ್ತದೆ. ಸದರಿ ಪಠ್ಯಕ್ರಮದ ಪ್ರತಿ ಲಗತ್ತಿಸಲಾಗಿದೆ.

ಅಧ್ಯಯನ ಮಂಡಳಿಯು ಶಿಫಾರಸ್ಸು ಮಾಡಿದ ಐದನೇ ಮತ್ತು ಆರನೇ ಸೆಮಿಸ್ಟರ್ ಬಿ.ಎಸ್ಸಿ ಗಣಿತಶಾಸ್ತ್ರ ವಿಷಯದ ಪಠ್ಯಕ್ರಮವನ್ನು 2022–23 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಗಣಿತಶಾಸ್ತ್ರ ಸ್ನಾತಕ ಅಧ್ಯಯನ ಮಂಡಳಿ ಶಿಫಾರಸ್ಸು ಮಾಡಿದ 5ನೇ ಮತ್ತು 6ನೇ ಸೆಮಿಸ್ಟರ್ ಬಿ.ಎಸ್ಸಿ ಗಣಿತಶಾಸ್ತ್ರ ವಿಷಯದ ಪಠ್ಯಕ್ರಮಕ್ಕೆ ವಿದ್ಯಾವಿಷಯಕ ಪರಿಷತ್ ಸಭೆ ಅನುಮೋದನೆ ನೀಡಿತು.**

ವಿಷಯ ಸಂಖ್ಯೆ: 6

Sub: Implementation of revised Syllabus for the M.Sc. Speech Language Pathology and M.Sc. Audiology Courses from the academic year 2022-23.

***REFERENCE NOTE***:

The Syllabus of the M.Sc. Speech Language Pathology and M.Sc. Audiology Courses are being offered at the Samvaad Institute of Speech and Hearing under CBCS Semester Scheme. The Board of Studies in Speech & Hearing has approved the Syllabus by circulation on 19.07.2022.

Pending ratification by the Academic Council, I to VI Semester Syllabus of M.Sc. Speech Language Pathology and M.Sc. Audiology Courses have been implemented from the academic year 2022-23 vide notification dated 19.08.2022.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**M.Sc. Speech Language Pathology ಮತ್ತು M.Sc. Audiology ವ್ಯಾಸಂಗದ ಪಠ್ಯಕ್ರಮಗಳನ್ನು ಜಾರಿಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.**

ವಿಷಯ ಸಂಖ್ಯೆ: 7

Sub: Ratification of implementation of B.Sc (Rehabilitation Science) Syllabus from the academic year 2021-22.

***REFERENCE NOTE***

Consequent upon implementation of NEP-2020, the courses under different faculties have been redefined as per the new Regulations under NEP 2020. Accordingly the BoS have framed the syllabus in accordance with the new Regulations and the same are placed before the Academic Council held on 12.10.2021. The Academic Council while approving the new Regulations and Syllabus of different subjects authorized the Vice-Chancellor to approve the syllabus of remaining subjects on behalf of Academic Council.

The Syllabus of the B.Sc (Rehabilitation Science) is being offered under NEP program at St. Ann's Degree College for Women affiliated to Bengaluru City University. The Board of Studies in Speech & Hearing has approved the Syllabus by Circulation on 28th December 2021.

As per the authorization given by the Academic Council, the Syllabus of I to VI Semester B.Sc (Rehabilitation Science) Course has been implemented from the academic year 2021-22 vide Notification dated 10.05.2022.

The matter is placed before the Academic Council for ratification.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**B.Sc. (Rehabilitation Science) ವಿಷಯದ I ರಿಂದ VI ನೇ ಸೆಮಿಸ್ಟರ್‌ಗಳ ಪಠ್ಯಕ್ರಮಗಳನ್ನು ಜಾರಿಗೊಳಿಸಿದ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.**

ವಿಷಯ ಸಂಖ್ಯೆ: 8

Sub: Institution of PG Diploma Course in Psychological Counselling under Faculty of Science from the academic year 2022-23 at Bengaluru City University and approval of Syllabus – reg.

***REFERENCE NOTE***

The Board of Studies in Psychology (PG & UG) in its meeting held on 29.09.2021 has recommended for institution of PG Diploma in Psychological Counselling Course under the Faculty of Science from the academic year 2022-23 at Bengaluru City University and recommended the Syllabus for P.G. Diploma Course in Psychological Counselling.

The proceedings of the meeting of the Board of Studies in Psychology (PG & UG) and the Syllabus recommended by the Board for PG Diploma Course in Psychological Counselling are placed before the Academic Council for Institution of P.G. Diploma Course in Psychological Counselling and approval of Syllabus for the said course.

ವಿದ್ಯಾವಿಷಯಕ ಪರಿಷತ್ ನಿರ್ಣಯ:

**2022–23ನೇ** ಸಾಲಿನಿಂದ **P.G. Diploma in Psychological Counseling** ಕೋರ್ಸ್‌ನ್ನು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲು ಹಾಗೂ ಈ ವ್ಯಾಸಂಗಕ್ಕೆ ಸಂಬಂಧಿತ, ಅಧ್ಯಯನ ಮಂಡಳಿ ಶಿಫಾರಸ್ಸು ಮಾಡಿರುವ ಪಠ್ಯಕ್ರಮಗಳಿಗೆ ವಿದ್ಯಾವಿಷಯಕ ಪರಿಷತ್ ಅನುಮೋದನೆ ನೀಡಲು ತೀರ್ಮಾನಿಸಿತು.

ವಿಷಯ ಸಂಖ್ಯೆ: 9

Sub: Approval of Syllabus for the III & IV Semester M.Sc. Nutrition and Dietetics Course from the academic year 2022-23.

***REFERENCE NOTE:***

The M.Sc. Nutrition and Dietetics Course is being offered at the Bishop Cotton Women's Christian College under CBCS Semester Scheme. The Board of Studies in Home Science has prepared and approved the Syllabus for III & IV Semester of M.Sc. Nutrition and Dietetics Course in its meeting held on 16.09.2022.

I and II Semester Syllabus for M.Sc. Nutrition and Dietetics Course have been implemented from the academic year 2021-22 vide notification dated 01.12.2021.

The Syllabus of III & IV Semester M.Sc. Nutrition and Dietetics Course is placed before the Academic Council for consideration and approval.

ವಿದ್ಯಾವಿಷಯಕ ಪರಿಷತ್ ನಿರ್ಣಯ

ಅಧ್ಯಯನ ಮಂಡಳಿ ಸಿದ್ಧಪಡಿಸಿದ **M.Sc. Nutrition and Dietetics** ವ್ಯಾಸಂಗದ 3ನೇ ಮತ್ತು 4ನೇ ಸೆಮೆಸ್ಟರ್‌ಗಳ ಅಧ್ಯಯ ಪಠ್ಯಕ್ರಮಕ್ಕೆ ಅನುಮೋದನೆ ನೀಡಲು ಸಭೆ ನಿರ್ಣಯಿಸಿತು.

ವಿಷಯ ಸಂಖ್ಯೆ: 10

ವಿಷಯ: ಚಿತ್ರಕಲಾ ಮಹಾವಿದ್ಯಾಲಯ ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ: ಇಡಿ 48 ಯುಬಿವಿ 2022 ದಿನಾಂಕ: 16.08.2022

2. ಸಿಂಡಿಕೇಟ್ ಅನುಮೋದನೆ ದಿನಾಂಕ: 17.09.2022

***ಪರಾಮಾರ್ಶಕ ಟಿಪ್ಪಣಿ:***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯವು ತ್ರಿಭಜನೆಯಾದ ನಂತರ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ 13 ವಿಧಾನ ಸಭಾ ಕ್ಷೇತ್ರಗಳ ಶಾಂತಿನಗರ, ಬ್ಯಾಟರಾಯನಪುರ, ಯಲಹಂಕ, ಮಲ್ಲೇಶ್ವರಂ, ಹೆಬ್ಬಾಳ, ಶಿವಾಜಿನಗರ, ಗಾಂಧಿನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಬಸವನಗುಡಿ, ಬಿ.ಟಿ.ಎಂ. ಲೇಔಟ್, ಜಯನಗರ, ರಾಜಾಜಿನಗರ ಕ್ಷೇತ್ರಗಳಲ್ಲಿರುವ ಮಹಾವಿದ್ಯಾಲಯಗಳನ್ನು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ವಹಿಸಲಾಗಿದೆ.

ಶಿವಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಒಂದು ಸ್ವಾಯತ್ತ ಚಿತ್ರಕಲಾ ಮಹಾವಿದ್ಯಾಲಯವು ಚಿತ್ರಕಲೆಗೆ ಸಂಬಂಧಿಸಿದ ವಿಷಯದಲ್ಲಿ ದೇಶದ ಉತ್ಕೃಷ್ಟ ಶಿಕ್ಷಣ ಸಂಸ್ಥೆಯನ್ನಾಗಿ ರೂಪಿಸುವ ಉದ್ದೇಶದಿಂದ ನಾವೀನ್ಯ ಮೂಲಸೌಕರ್ಯಗಳೊಂದಿಗೆ ರಾಜರಾಜೇಶ್ವರಿ ನಗರದ ಡಾ. ವಿಷ್ಣುವರ್ಧನ ರಸ್ತೆಯಲ್ಲಿರುವ ಶ್ರೀನಿವಾಸಪುರ ಕ್ಯಾಂಪಸ್‌ಗೆ ಸ್ಥಳಾಂತರ ಮಾಡಿರುತ್ತಾರೆ.

ಉಲ್ಲೇಖದಲ್ಲಿ ನಮೂದಿಸಿದ ಸರ್ಕಾರದ ಪತ್ರದಲ್ಲಿ ಸ್ವಾಯತ್ತ ಚಿತ್ರಕಲಾ ಮಹಾವಿದ್ಯಾಲಯ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ವ್ಯಾಪ್ತಿಯಿಂದ ರಾಜರಾಜೇಶ್ವರಿ ನಗರದ ಡಾ. ವಿಷ್ಣುವರ್ಧನ ರಸ್ತೆಯಲ್ಲಿರುವ ಶ್ರೀನಿವಾಸಪುರ ಕ್ಯಾಂಪಸ್‌ಗೆ ಸ್ಥಳಾಂತರವಾಗಿರುವುದರಿಂದ ಈ ವಿದ್ಯಾಸಂಸ್ಥೆಯ ಸ್ಥಳವು ಬೆಂಗಳೂರು ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿಗೆ ಒಳಪಡುವುದರಿಂದ 2022–23ನೇ ಸಾಲಿನಿಂದ ಬೆಂಗಳೂರು ವಿಶ್ವವಿದ್ಯಾಲಯಲ್ಲಿ ಸಂಯೋಜನೆಯನ್ನು ಮುಂದುವರೆಸಲು ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ತಿಳಿಸಲಾಗಿದೆ. ಮೇಲೆ ತಿಳಿಸಿದ ಕಾರಣದಿಂದಾಗಿ, ಸದರಿ ಚಿತ್ರಕಲಾ ಮಹಾವಿದ್ಯಾಲಯದಲ್ಲಿ 2021–22ನೇ ಸಾಲಿನಲ್ಲಿ ಪ್ರವೇಶ ಪಡೆದ ಸಂಶೋಧನಾ/ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳ ಅಂತಿಮ ವರ್ಷದ ಸೆಮಿಸ್ಟರ್‌ಗಳು ಮುಗಿಯುವವರೆಗೆ ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಾಗಿ ಮುಂದುವರೆಸಬೇಕಾಗುತ್ತದೆ ಮತ್ತು ಇದಕ್ಕೆ ಸಂಬಂಧಿಸಿದಂತೆ, ವಾರ್ಷಿಕ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾಗಿರುತ್ತದೆ. ಈ ಮಹಾವಿದ್ಯಾಲಯವು 2022–23ನೇ ಸಾಲಿನಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ವಾಯತ್ತ ಮಹಾವಿದ್ಯಾಲಯವಾಗಿ ಮುಂದುವರೆಯುತ್ತದೆ.

ದಿನಾಂಕ 17.09.2022ರಂದು ಜರುಗಿದ ಸಿಂಡಿಕೇಟ್ 19ನೇ ಸಾಮಾನ್ಯ ಸಭೆಯ ತೀರ್ಮಾನದಂತೆ, ಚಿತ್ರಕಲಾ ಪರಿಷತ್ ಸ್ವಾಯತ್ತ ಮಹಾವಿದ್ಯಾಲಯವನ್ನು ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಪ್ರದೇಶಕ್ಕೆ ಸ್ಥಳಾಂತರವಾಗಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದ ನಿರ್ದೇಶನದಂತೆ, ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಗೆ ಒಳಪಡುವ ಮಾಹಿತಿಗೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

ಈ ವಿಷಯವನ್ನು ಸಿಂಡಿಕೇಟ್ ಸಭೆ ಅನುಮೋದನೆ ನೀಡಿರುವ ಹಿನ್ನಲೆಯಲ್ಲಿ ವಿದ್ಯಾವಿಷಯಕ ಪರಿಷತ್ ಸಭೆಯ ಮಾಹಿತಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಚಿತ್ರಕಲಾ ಸ್ವಾಯತ್ತ ಮಹಾವಿದ್ಯಾಲಯದ ನೂತನ ಆವರಣ ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಕುರಿತು ರಾಜ್ಯ ಸರ್ಕಾರ ನೀಡಿದ ನಿರ್ದೇಶನಕ್ಕೆ ಸಿಂಡಿಕೇಟ್, ಸಭೆಯ ಅನುಮೋದನೆ ನೀಡಿರುವುದನ್ನು ಪರಿಗಣಿಸಿ, ವಿದ್ಯಾವಿಷಯಕ ಪರಿಷತ್ತು ಸಹಮತ ವ್ಯಕ್ತಪಡಿಸಿತು.**

ವಿಷಯ ಸಂಖ್ಯೆ: 11

Sub: Expression of Interest submitted to the British Council seeking collaboration from UK Universities.

***REFERENCE NOTE:***

Two round table conferences were held on 9$^{TH}$ June and 16$^{th}$ July 2022 under the joint collaboration of **KSHEC and British Council Chaired by Hon'ble Minister for Higher Education and Chairman of KSHEC Dr. C.N. Ashwath Narayan**. All the Vice-Chancellors of the State and special delegations of VCs from UK have participated in this dialogue. The theme of first round table discussion was "Strengthening UK – Karnataka Collaboration in Education, Research and Innovation". The theme of Second round table discussion held under virtual mode was "Relevance and interest of Higher Education." The objective is to engage leadership of Higher Education in implementation of NEP.

Based on the suggestions made-out in the dialogue, EoI's have been invited from the Universities. Accordingly, the Bengaluru City University has submitted the EoI on 18$^{th}$ April, 2022. The British Council has accepted our Expression of interest and agreed for a grant of GBP 10,000 per collaboration. As per the terms of reference, the University has to agree for a matching grant equivalent to GBP 10,000. The Scope of the work involves:

- Opportunities for students, faculty and coaching staff of BCU and UK Universities together to attend research seminars, conference, workshops projects, internships, faculty enrichment programmes cultural exchange programmes.
- Especially Environment Studies and Climate Change and Urban Studies and Planning will benefit in redesigning the course and collaboration.
- Collaboration in Sports Science and Physical Education in developing the Sport Complex, designing the curriculum, training and protocols.
- For collaboration to strengthen Dept of Technology, Visual Arts, and to introduce new age courses such as Artificial Intelligence, Machine Learning, IoT, Big Data, Robatics etc.

After in principle and formal acceptance of this offer and commitment of the contribution from the University, the two parties will enter into an operational alliance under the BCU- KSHEC MoU.

Similarly the University could enter into the MoU with the Universities in U.K. by making matching grant equivalent to the grants sanctioned by the British Council / University of U.K. and other incidental expenses for each program. The MoU, could cover seminars, workshops, research, faculty enrichment, faculty exchange, student exchange programme and such other academic collaborations.

The Bengaluru City University (BCU) has been chosen for partnership with British Council for taking forward the initiative. Hence, the matter is placed before the Academic Council for consideration and approval.

ವಿದ್ಯಾವಿಷಯಕ ಪರಿಷತ್ ನಿರ್ಣಯ:

ಉನ್ನತ ಶಿಕ್ಷಣ ಪರಿಷತ್ತಿನ ಸಹಯೋಗದೊಂದಿಗೆ ಬ್ರಿಟಿಷ್ ಕೌನ್ಸಿಲ್ ಜೊತೆಗೆ ಯುನೈಟೆಡ್ ಕಿಂಗಡಮ್ ವಿಶ್ವವಿದ್ಯಾನಿಲಯಗಳೊಂದಿಗೆ ಶೈಕ್ಷಣಿಕ ಸಹಯೋಗದ ಆಸಕ್ತಿ ವ್ಯಕ್ತಪಡಿಸಿ ಸಲ್ಲಿಸಿದ ಪ್ರಸ್ತಾವನೆಗೆ ಅಲ್ಲಿಯ ಐದು ವಿಶ್ವವಿದ್ಯಾಲಯಗಳು ಬೆಂಗಳೂರು ನಗರ ವಿಶ್ವವಿದ್ಯಾನಿಲಯದೊಂದಿಗೆ ಸಹಯೋಗಕ್ಕಾಗಿ ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆಗಳಿಗೆ ಆಯ್ಕೆಯಾಗಿರುವುದಕ್ಕೆ ಸಭೆ ಹರ್ಷ ವ್ಯಕ್ತಪಡಿಸಿ ಅನುಮೋದನೆ ನೀಡಿತು. ಈ ಕುರಿತು ವಿಶ್ವವಿದ್ಯಾನಿಲಯದ ಕುಲಪತಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಅಭಿನಂದನೆಗಳನ್ನು ವ್ಯಕ್ತಪಡಿಸಿತು.

ವಿಷಯ ಸಂಖ್ಯೆ: 12

Sub: Signing of MoU between A) Karnataka State Higher Education Council and NSE Academy Limited and (B) Bengaluru City University and National Stock Exchange Academy for imparting Financial Education and Investment Awareness Course as a regular/compulsory course at 2nd year of UG Course.

***REFERENCE NOTE:***

The Model Curriculum Committee for Commerce and Management subject has designed a two credit course by name "Financial Education and Investment Awareness" in collaboration with National Stock Exchange Academy. The KSHEC has informed that the course is designed for all UG programs to be offered in the Second year from the Academic Year 2022-23. In this connection an MoU is signed between KSHEC and NSE Academy on 12.07.2022 in the presence of Hon'ble Minister for Higher Education, IT, BT, Science & Technology, Skill Development, Entrepreneurship and Livelihood. The role of KSHEC is recommendatory and monetary in nature. Simultaneously, 20 State Universities and NSE

have entered into the MoU. The MoU involves (A) Programme Implementation-I: Creation, Delivery and Timelines of the program. (B) Program Implementation-II – Train the Trainer by NSE Academy. Further details regarding, Payment Terms, Roles and Responsibilities of the University, Indemnification, Limitation of Liability, IPR, Representation, Warranty by University, Confidentiality. Force Majeure, Disputes Clause etc are enumerated in the MoU.

The matter is placed before the Academic Council for consideration and approval.

ವಿದ್ಯಾವಿಷಯಕ ಪರಿಷತ್ ನಿರ್ಣಯ:

**ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಆಶ್ರಯದಲ್ಲಿ, ರಾಷ್ಟ್ರೀಯ ಸ್ಟಾಕ್ ಎಕ್ಸ್‌ಚೈಂಜ್ ಅಕಾಡೆಮಿ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾನಿಲಯಗಳ ಮಧ್ಯ ಸ್ನಾತಕ 3ನೇ ಮತ್ತು 4ನೇ ಸೆಮೆಸ್ಟರ್‌ಗಳಲ್ಲಿ ಕಡ್ಡಾಯವಾಗಿ ಬೋಧಿಸಬೇಕಾದ "Financial Education and Investment Awareness" ವಿಷಯದ ಪಠ್ಯಕ್ರಮದ ನಿರ್ವಹಣೆ ಕುರಿತು ಮಾಡಿಕೊಂಡ ಒಡಂಬಡಿಕೆಗೆ ಸಭೆ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ: 13

Sub: Consideration and approval of the Syllabus for the III & IV Semester of the UG Course recommended by the Board of Studies in the Faculty of Commerce as per the NEP -2020 guidelines –reg

***REFERENCE NOTE*:**

The following Chairpersons were requested to convene the Board of Studies and submit the Syllabus duly approved by the BoS as per the guidelines and Regulations of NEP 2020

1. Prof. Muniraju M, Chairman BoS (UG): B.Com, B.Com /Insurance /Business Data Analytics /Accounting and Finance / LSCM / Travel and Tourism and BA Marketing)
2. Dr. K.R. Jalaja, Chairperson BoS (UG): BBA, BBA (Aviation Management) BHM & B.Voc.

The Model Program Structures and8 the Syllabus prepared by the Subject Experts Committees constituted by the Karnataka State Higher Education Council were sent to the Chairpersons for the reference of the Board of Studies. The two Chairpersons have submitted the following Syllabus for the III & IV Semester UG Course with due approval of the Under Graduate Boards of Studies in the Faculty of Commerce for implementation from the academic year 2022-23.

| Sl. No. | Board of Studies | BoS Meeting held on |
|---|---|---|
| Prof. Muniraju M- Chairman BoS | | |
| 1. | B.Com | 14.10.2022 |
| 2. | B.Com –Logistics and Supply Chain Management | |
| 3. | B.Com –Accounting and Finance | |
| 4. | B.Com – Travel & Tourism Management | |
| 5. | B.Com – Business Data Analytics | |
| Dr. K. R. Jalaja- Chairman BoS | | |
| 6. | BBA | $29^{th}$ & 30 September and $1^{st}$ October, 2022 |
| 7. | BBA (Aviation Management) | |
| 8. | BTTM (I & II Semester Syllabus for implementation from Academic Year 2022-23) | |
| 9. | B.Voc. (Retail Management) | |
| 10. | B.Voc. (Accounting and Taxation) | |
| 11. | B.H.M | |

The Syllabus approved by the Boards of Studies are placed before the Academic Council for consideration and approval.

ವಿದ್ಯಾವಿಷಯಕ ಪರಿಷತ್ ನಿರ್ಣಯ:

ವಾಣಿಜ್ಯ ನಿಕಾಯ ವಿವಿಧ ವ್ಯಾಸಂಗಗಳ ಪಠ್ಯಕ್ರಮಗಳಿಗೆ ವಿದ್ಯಾವಿಷಯಕ ಪರಿಷತ್ ಅನುಮೋದನೆ ನೀಡಲು ತೀರ್ಮಾನಿಸಿತು.

ಪ್ರಸ್ತುತ ಅನುಮೋದಿತ ಪಠ್ಯಕ್ರಮಗಳನ್ನು ಜಾರಿಗೊಳಿಸುವಾಗ ಅಗತ್ಯವಾದ ತಿದ್ದುಪಡಿಗಳನ್ನು ಪರಿಗಣಿಸಿ ಜಾರಿಗೊಳಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ವಿಷಯ ಸಂಖ್ಯೆ: 14

Sub: Signing of MoU with Infosys Ltd., Bengaluru regarding launching of Spring Board initiative to accelerate the learning with curriculum-rich virtual platform

***REFERENCE NOTE:***

As per the initiatives of Hon'ble Minister for Higher Education, Dr. C.N. Ashwath Narayan who is also Chairman of the KSHEC, the Infosys limited has been kind enough to sign a Memorandum of Understanding with the Bengaluru City University enabling the University teachers and students to use the Spring Board which provides curriculum rich virtual platform that delivers corporate-grade learning experiences, on any device with closer educator-learner collaboration for students. This Spring Board will help to accelerate digital re-skilling for participating learning from school to University.

The Spring Board empowers:

- Students to 'learn by doing' and develop holistically in preparation for emerging jobs and career opportunities.
- Women with a focused learning micro site, specialized resources and expert mentors for holistic development as planned and scheduled events.
- Working professionals with advanced digital skills to prepare them for new age and emerging roles of future.
- Teachers to better collaborate with learners on their skilling journey using the platform's engagement features.
- NGOs to extend learning benefits more broadly, especially to the underserved sections of society.

The Spring Board also has the Faculty enablement programme for the benefit of teachers:

- Evaluating the courses available on Springboard environment through Boards of Studies of respective departments for their adoption or adaption into formal curriculum of UG and PG programmes of the University.
- Exploring the possibilities of using the capabilities / features of Springboard to enhance the operational efficiency of educational ecosystem
- Building a team for planning, monitoring and reviewing the progress of Springboard usage. This team will have one single point of contact of Curriculum Enrichment initiative and representatives from Infosys and Karnataka State Higher Education Council.

The MoU has been signed between Mr. Thirumala Arohi, Senior Vice President of Infosys Limited and Shri. C.N. Sridhar, Registrar Bengaluru City University on 06.09.2022 in the MoU signing ceremony held at Room No. 334, Vidhana Soudha, Bengaluru in the presence of Hon'ble Minister for Higher Education, Seniors officers of the Higher Education Department and University.

The matter is placed before the Academic Council for information.

ವಿದ್ಯಾವಿಷಯಕ ಪರಿಷತ್ ನಿರ್ಣಯ:

**Infosys** ಸಂಸ್ಥೆಯೊಂದಿಗೆ ಸ್ನಾತಕ ಮತ್ತು ಸ್ನಾತಕೋತ್ತರ ವ್ಯಾಸಂಗಗಳಿಗೆ ಅಗತ್ಯವಾದ ಕಲಿಕೆಗೆ ಪೂರಕವಾದ ಡಿಜಿಟಲ್ **Virtual Platform** ಹೊಂದಿದ **Spring Board** ಉಪಯೋಗವನ್ನು ವಿಶ್ವವಿದ್ಯಾನಿಲಯ ಮತ್ತು ಮಹಾವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಪಡೆಯಲು ಅಗತ್ಯವಾದ ಒಡಂಬಡಿಕೆ ಮಾಡಿಕೊಂಡಿರುವುದನ್ನು ಸಭೆ ಗಮನಿಸಿ ಅನುಮೋದನೆ ನೀಡಿತು. ಶೈಕ್ಷಣಿಕವಾಗಿ ಉಪಯುಕ್ತವಾದ ಈ ಕ್ರಮಕ್ಕೆ ಮಾನ್ಯ ಕುಲಪತಿಗಳಿಗೆ ಹಾಗೂ ಸಹವರ್ತಿ ಅಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿತು.

ವಿಷಯ ಸಂಖ್ಯೆ: 15

Sub: Course structure and Syllabus for newly instituted Postgraduate Diploma Course in (i) Business Analytics (ii) Family Business and Entrepreneurship

Ref: Resolution of the Academic Council No 2 dated 06.08.2022.

***REFERENCE NOTE:***

The Academic Council in its meeting held on 06.08.2022 has accorded in principle approval for introduction of following two P.G. Diploma Courses proposed by the Chairman P.G. Department of Commerce.

1. P.G. Diploma in Business Analytics
2. P.G. Diploma in Family Business and Entrepreneurship

The Academic Council while according in principle approval for introduction of the course has directed the BoS to prepare necessary rules and syllabus.

As per the directions of the Academic Council, the Chairman of the BoS in Commerce has submitted the Regulations, Course Structure and Syllabus for the above said two P.G. Diploma courses with due approval of the BoS.

The Course structure and syllabus are placed before the Academic Council for consideration and approval.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಹೊಸದಾಗಿ ಸ್ಥಾಪಿಸಲಾದ P.G. Diploma in Business Analytics ಹಾಗೂ P.G. Diploma in Family Business and Entrepreneurship ವ್ಯಾಸಂಗಗಳ ವಿಧಿ-ವಿಧಾನ ಹಾಗೂ ಪಠ್ಯಕ್ರಮಗಳಿಗೆ ವಿದ್ಯಾವಿಷಯಕ ಪರಿಷತ್ ಅನುಮೋದನೆ ನೀಡಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 16

Sub: Revision of Syllabi for P.G Diploma Courses in a) Business Administration b) Human Resource Management c) Marketing Management d) Financial Management

***REFERENCE NOTE*:**

The following P.G. Diploma Courses are being offered under the faculty of Commerce.

Post Graduate Diploma in:

1. Business Administration
2. Human Resource Management
3. Marketing Management
4. Financial Management

The Syllabus for the above Courses have not been revised since inception of the University i.e., 2018. The concerned Board of Studies in its meetings held on 29th and 30th September and 1st October at 2022 has revised the Syllabus for the above Courses. The Chairperson of the BoS has submitted the approved Syllabus for implementation from the Academic Year 2022-23.

The Syllabi approved by the BoS for the above Courses are placed before the Academic Council for consideration and approval.

ವಿದ್ಯಾವಿಷಯಕ ಪರಿಷತ್ ನಿರ್ಣಯ:

**P.G. Diploma in 1) Business Administration, 2)Human Resource Management, 3)Marketing Management and Financial Management ವ್ಯಾಸಂಗಗಳ ಪಠ್ಯಕ್ರಮಗಳನ್ನು ಜಾರಿಗೊಳಿಸಲು ವಿದ್ಯಾವಿಷಯಕ ಪರಿಷತ್ ಅನುಮೋದನೆ ನೀಡಿತು.**

ವಿಷಯ ಸಂಖ್ಯೆ: 17

Sub: Revision of Model Course Structure and introduction of India and Indian Constitution under Ability Enhancement Compulsory Courses (AECC) at III & IV Year UG Courses –Revised Syllabus

Ref: Email Vice-Chairman dated. 09.10.2022.

***REFERENCE NOTE***:

The Vice-Chairman of Karnataka State Higher Education Council (KSHEC) has sent the updated Model Programme Structure for various under graduate programs in Arts, Science, Commerce and Management courses, the same is enclosed. These models are updated in the light of UGC Notification of National Higher Education Qualification Frame work (NHEQF) and Curricular frame work and Credit System for the four year Under Graduate Programme (4YUGP). The details of the communication are as under:

1. The changes are made especially in the 3rd and 4th year of the programmes for which the model course contents are to be drafted . The strong research component as envisaged in the UGC notifications has been included.
2. There are also some additional requirements to award the undergraduate certificates or diplomas or the basic undergraduate degrees to be awarded at the completion of the first year, second year and third year of the 4YUGP.
3. The changes in credits system have been made in respect of Environmental Studies and the Indian Constitution compulsory papers. They carry 3 –credits each instead of 2-creidts each in line with the UGC documents.
4. Regarding the Open Elective Papers, the students have no option but to go out of the faculty for 3 papers as per UGC stipulations, as the document says the science

students have to study papers equal to a minimum of 9-credits in the Arts Faculty and vice-versa. The same thing applies to other faculties.

5. The documents stipulate that there should be strong research component in all the honours programmes: Research Methodology courses, research proposal formulation, research proposal formulation, research internship and Project work. All these aspects have been built into the system.

   The Higher Education Council has sought the feedback on the above updated programme structure.

**Following Changes are made in the Programme Structure**

1. Earlier SEC-1 Digital Fluency was prescribed for First Semester and Environmental Studies for Second Semester with 2 Credits.
   Now, Environmental Studies (with 3 Credits) or SEC-1 Digital Fluency (2 Credits) is Prescribed at I and II Semester concurrently.

2. Earlier SEC-2 Artificial Intelligence or some other SEC (2 Credits) was prescribed for III Semester and Constitution of India (2 Credits) at IV Semester.
   Now, SEC-2 Artificial Intelligence / SEC-3 Financial Education and Investment Awareness (2 Credits) is introduced at III and IV Semester under SEC and Indian Institution are Open Elective 3 (3 credits) is prescribed

3. Earlier under DSE E1-(3 Credits), Vocational 1 (3 Credits) was Prescribed at V Semester and E2- (3 Credits), Vocational-2 (3 Credits), Internship (2 Credits) for VI Semester Prescribed.
   Now, DSE-A1(3 Credits) Vocational 1& 2 (3 Credits each) for V Semester and Vocational 3 & 4 (3 Credits each) and Research Methodology-1 at VI Semester introduced.
   Secondly earlier SEC-3 Cyber Security (2 Credits) or some other SEC (2 Credits) at V Semester and SEC-4 Societal Communication (2 Credits) at VI Semester was prescribed.
   Now, SEC-4 Cyber Security (2 Credits) / Internship (2 Credits) is Prescribed for V Semester and SEC-5 relevant SEC / Internship is Prescribed (2 Credits).

4. Earlier DSE-3 (3 Credits) Vocational 3 (3 Credits), Research Methodology (3 Credits) for the VII Semester and DSE-4 (3 Credits) Vocational 4 (3 Credits), Research Project (6 Credits) was Prescribed.
   Now, DSE-A2 (3 credits), Research Methodology -2 (3 Credits), Research Proposal (4 Credits) for VII Semester and Internship (4 Credits), Research Project (6 Credits) are introduced.

   Similar Changes are made in other Models.

The model Programme structure sent by Hon'ble Vice-Chairman, KSHEC is enclosed. The finalized Structure is to be implemented from the academic year as advised by KSHEC.

The matter is placed before the Academic Council for consideration and approval.

ವಿದ್ಯಾವಿಷಯಕ ಪರಿಷತ್ ನಿರ್ಣಯ:

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಸಿದ್ಧಪಡಿಸಿದ ಮಾದರಿ ವ್ಯಾಸಂಗ ಕ್ರಮಗಳನ್ನು (**Model Course Structure**) ಸಭೆ ಅವಲೋಕಿಸಿತು. ಸದರಿ ವ್ಯಾಸಂಗ ಕ್ರಮಗಳ ಕುರಿತು ಉನ್ನತ ಶಿಕ್ಷಣ ಪರಿಷತ್ತು ಅಂತಿಮಗೊಳಿಸುವ ವ್ಯಾಸಂಗ ಕ್ರಮಗಳನ್ನು ಪರಿಶೀಲಿಸಿ ಅನುಮೋದಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ವಿದ್ಯಾವಿಷಯಕ ಪರಿಷತ್ ಸಭೆ ನಿರ್ಣಯಿಸಿತು.

ವಿಷಯ ಸಂಖ್ಯೆ: 18

Sub: 1. Revision of MA Spanish and French Syllabus. 2. Introduction of New One Year Diploma Course in 'Japanese Language for Skilled Workforce'.

***REFERENCE NOTE*:**

1. The Chairperson of the Board of Studies in Foreign Languages has submitted the revised syllabus for the following courses, after seeking approval of the BoS in the meetings held on 1st July and 23rd September at 2022.s
    a) M.A. Spanish –I to IV Semester
    b) M.A. French – I to IV Semester

The Syllabi approved by the BoS for the above Courses are placed before the Academic Council for consideration and approval.

2. The BoS has also recommended for introduction one year Diploma Course in Japanese Language for Skilled Workforce. The syllabus, course structure and eligibility criteria proposed by the BoS are placed before the Academic Council for consideration and approval.

ವಿದ್ಯಾವಿಷಯಕ ಪರಿಷತ್ ನಿರ್ಣಯ:

ವಿದೇಶಿ ಭಾಷೆಗಳ ಅಧ್ಯಯನ ಮಂಡಳಿ ಶಿಫಾರಸ್ಸು ಮಾಡಿರುವ **M.A. Spanish–I to IV Semester, M.A. French – I to IV Semester** ಪಠ್ಯಕ್ರಮಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆ ಅನುಮೋದನೆ ನೀಡಿತು.

**ಇದಲ್ಲದೆ, ಅಧ್ಯಯನ ಮಂಡಳಿ ಶಿಫಾರಸ್ಸು ಮಾಡಿದ ಒಂದು ವರ್ಷದ ಡಿಪ್ಲೋಮ ವ್ಯಾಸಂಗಕ್ಕೆ ಹಾಗೂ ಅದರ ಪಠ್ಯಕ್ರಮಕ್ಕೆ ಒಪ್ಪಿಗೆ ಸೂಚಿಸಿತು.**

ವಿಷಯ ಸಂಖ್ಯೆ: 19

Sub: Conduct of examination for Non-NEP Students of 4th and 5th Semester UG Courses

***REFERENCE NOTE*:**

As per the Regulations No.16 of the NEP Regulations effective from 2021-22, "Candidates who fails in the lower semester examination may go to the higher semester and take the lower semester examinations". The Non-NEP Regulations applicable for students prior to 2020-21, has similar provision.

In view of above Regulations, the students who appears and fail in the examinations are allowed to keep the terms for next semester. However the Students who do not take the examinations will have the readmission problems.

In order to overcome this issue the Colleges may be informed to collect the examination fees of V and VI Semester in the beginning of the academic year along with admission fees and register the students for the respective examinations.

The students, who are not eligible in view of shortage of attendance etc., may be detained from examinations by withholding admission card and suitable remarks in the candidates list. However making good of shortage of admission need to be addressed.

The matter is placed before the Academic Council for consideration.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಈ ಕುರಿತು ಸಾಧಕ ಬಾಧಕಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಒಂದು ಸಮಿತಿ ರಚಿಸಲು ಹಾಗೂ ಆ ಸಮಿತಿ ನೀಡುವ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ವಿದ್ಯಾವಿಷಯಕ ಪರಿಷತ್ ಸಭೆ ನಿರ್ಣಯಿಸಿತು.**

ವಿಷಯ ಸಂಖ್ಯೆ: 20

ವಿಷಯ: ಸ್ನಾತಕೋತ್ತರ ವ್ಯಾಸಂಗದ ಬೆಸ ಸಂಖ್ಯೆಯ ಸೆಮೆಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಒಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸುವ ಕುರಿತು

ಪ್ರಸ್ತಾವನೆ:

"ವಿಶ್ವವಿದ್ಯಾಲಯವು ಪ್ರತಿ ಸ್ನಾತಕೋತ್ತರ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಇಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮೌಲ್ಯಮಾಪನ ಮಾಡಿಸುತ್ತಿದ್ದು, ಫಲಿತಾಂಶಗಳನ್ನು ಸಕಾಲಕ್ಕೆ ನೀಡಲು ಕಷ್ಟಕರವಾಗಿದೆ. ಬಾಹ್ಯ ಮೌಲ್ಯಮಾಪಕರ ಕೊರತೆಯಿಂದಾಗಿ

ಅತಿಯಾಗಿದ್ದು, ಮೌಲ್ಯಮಾಪನ ಕಾರ್ಯ ನಿಗದಿತ ಸಮಯದಲ್ಲಿ ಮಾಡಲಾಗುತ್ತಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ತೊಂದರೆಗೀಡಾಗುತ್ತಿದ್ದಾರೆ. ಘನತೆಗೆ ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ವವಿದ್ಯಾಲಯವು ಮೌಲ್ಯಮಾಪನದ ಮಾನದಂಡಕ್ಕೆ ಚ್ಯುತಿ ಬರದಂತೆ ಸಮ ಸಂಖ್ಯೆಯ ಸೆಮೆಸ್ಟರ್ ಉತ್ತರ ಪತ್ರಿಕೆಗಳನ್ನು ಇಬ್ಬರು ಮೌಲ್ಯಮಾಪಕರಿಂದ, ಹಾಗೂ ಬೆಸ ಸಂಖ್ಯೆಯ ಸೆಮೆಸ್ಟರ್‌ಗಳ ಉತ್ತರ ಪತ್ರಿಕೆಗಳನ್ನು ಆಂತರಿಕ ಅಥವಾ ಬಾಹ್ಯ ಮೌಲ್ಯಮಾಪಕರಲ್ಲಿ ಒಬ್ಬರಿಂದ ಮೌಲ್ಯಮಾಪನ ಮಾಡಿಸಿದಲ್ಲಿ ವಿಳಂಬವಿಲ್ಲದೆ ಫಲಿತಾಂಶವನ್ನು ಪ್ರಕಟಿಸಬಹುದಾಗಿರುತ್ತದೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವ್ಯಾಸಂಗಗಳ ಪರಿನಿಯಮಗಳನ್ನು ಪಾಲನೆ ಮಾಡುತ್ತಿದ್ದು ಸದರಿ ಪರಿನಿಯಮದ ನಿಯಮ ಸಂಖ್ಯೆ 13.1 ಕೆಳಗಿನಂತೆ ಇರುತ್ತದೆ.

13.1 Each written paper shall be valued by one internal examiner and one external examiner. Each practical examination shall be jointly conducted and evaluated by one internal examiner and one external examiner or two external examiners if there are no internal examiners. But not by two internal examiners.

ಮೇಲಿನ ಪರಿನಿಯಮದ ಹಿನ್ನಲೆಯಲ್ಲಿ ಪ್ರಸ್ತಾವನೆಯನ್ನು ಪರಿಗಣಿಸಬೇಕಾಗಿದೆ. ಸದರಿ ಪರಿನಿಯಮ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮವಾಗಿದ್ದು, ಅಲ್ಲಿ ಅವರು ಕೈಗೊಂಡ ಕ್ರಮಗಳ ಕುರಿತು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

ವಿದ್ಯಾವಿಷಯಕ ಪರಿಷತ್ ನಿರ್ಣಯ:

**ಈ ವಿಷಯದಲ್ಲಿ ಒಳಗೊಂಡ ತಾಂತ್ರಿಕ – ಕಾನೂನಾತ್ಮಕ ಅಂಶಗಳನ್ನು ಪರಿನಿಯಮಗಳ ಅಡಿಯಲ್ಲಿ ಪರಿಶೀಲಿಸಿ ಪ್ರಾಸ್ತಾವನೆಯ ಸಾಧಕ ಭಾದಕಗಳನ್ನು ಹಾಗೂ ಈ ಇವುಗಳಿಗೆ ಸಂಬಂಧಿಸಿದಂತೆ ಪರಿನಿಯಮಗಳನ್ನು ಗಮನಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಒಂದು ಸಮಿತಿ ರಚಿಸಲು ಹಾಗೂ ಸಮಿತಿ ನೀಡುವ ಶಿಫಾರಸ್ಸುಗಳನ್ವಯ ಕ್ರಮವಹಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ಸಭೆ ತೀರ್ಮಾನಿಸಿತು.**

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಸಹಿ/–
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು